ಅ) ಪರವಾನಿಗೆಗಳಿಗಿಂತ ಎರಡರಷ್ಟು ಅಂಗಡಿಗಳನ್ನು ಗುತ್ತಿಗೆದಾರರು ಹೊಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕಳೆದ 3 ವರ್ಷಗಳಿಂದ ಪತ್ತೆ ಹಚ್ಚಲಾದ ಅಕ್ರಮ ಸಾರಾಯಿ ಮಾರಾಟ ಪ್ರಕರಣಗಳೆಷ್ಟು? ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 68.

ಆ) ಇಲ್ಲ.

ಇ) ಇಂತಹ ಯಾವುದೇ ಪ್ರಕರಣಗಳು ದಾಖಲಾಗಿಲ್ಲ ಉದ್ಭವಿಸುವುದಿಲ್ಲ.

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಹಂಚಿಕೆ**

1338 (1960) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿಯಲ್ಲಿ ಕಾನೂನು ಬಾಹಿರವಾಗಿ ನಿವೇಶನ ಹಂಚಿರುವ ಪ್ರಕರಣಗಳು ಎಷ್ಟು (11.10.1999ರ ನಂತರ);

ಆ) ಎಷ್ಟು ಪ್ರಕರಣಗಳಲ್ಲಿ ಅದಲಿ ಬದಲಿ ನಿವೇಶನ ಕೊಡಲಾಗಿದೆ (ವರ್ಷವಾರು ವಿವರ ಕೊಡುವುದು);

ಇ) 14.10.99ರ ನಂತರ ಎಷ್ಟು ಪ್ರಕರಣಗಳಲ್ಲಿ ಎಷ್ಟು ಎಕರೆ ಪ್ರದೇಶವನ್ನು ಡಿ ನೋಟಿಫಿಕೇಷನ್ ಮಾಡಲಾಗಿದೆ;

ಈ) ಸಹಕಾರ ಸಂಘವಲ್ಲದೆ ಬೇರೆ ಸಂಸ್ಥೆಗಳಿಗೆ ಡೆವಲಪರ್‌ಗಳಿಗೆ ಎಷ್ಟು ಎಕರೆ ಜಮೀನು ಕೊಟ್ಟಿದೆ. ಇದು ಕಾನೂನಿನ ಪ್ರಕಾರ ಕ್ರಮಬದ್ಧವೇ;

ಉ) ಬಿ.ಪಿ.ಎ. ಮೂಲಕ ಎಷ್ಟು ಪ್ರಕರಣಗಳಲ್ಲಿ ಲೇಔಟ್ ನಿರ್ಮಿಸಲು ಎಷ್ಟು ಎಕರೆ ಜಮೀನನ್ನು ನೀಡಲಾಗಿದೆ; ಈ ರೀತಿ ಜಮೀನು ಪಡೆದ ವ್ಯಕ್ತಿ ಅಥವಾ ಸಂಸ್ಥೆಗಳು ಯಾವುವು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಯಾವುದೂ ಇಲ್ಲ.

ಆ) ಒಟ್ಟು 736 ನಿವೇಶನಗಳನ್ನು ಬದಲಿ ನಿವೇಶನವಾಗಿ ಹಂಚಿಕೆ ಮಾಡಲಾಗಿದೆ.

1) 1.10.99 ರಿಂದ 31.3.2000ದವರೆಗೆ 389

2) 2.1.2000 ರಿಂದ 21.3.2001ರವರೆಗೆ 219

3) 1.4.2001 ರಿಂದ 31.3.2002ರವರೆಗೆ 37

4) 1.4.2002 ರಿಂದ 28.2.2002ರವರೆಗೆ 91

ಇ) 22 ಪ್ರಕರಣಗಳಲ್ಲಿ ಒಟ್ಟು 342 ಎಕರೆ 31 ಗುಂಟೆ ಜಮೀನನ್ನು ಡಿ ನೋಟಿಫಿಕೇಷನ್ ಮಾಡಲಾಗಿದೆ.

ಈ) ಸಹಕಾರ ಸಂಘವಲ್ಲದ ಬೇರೆ ಸಂಸ್ಥೆಗಳಿಗೆ ಇದುವರೆಗೆ 7 ಪ್ರಕರಣಗಳಲ್ಲಿ ಒಟ್ಟು 73 ಎಕರೆ 36 ಗುಂಟೆ ಜಮೀನನ್ನು ನಿಯಮಾನುಸಾರ ನೀಡಲಾಗಿದೆ.

ಉ) 7 ಪ್ರಕರಣಗಳಲ್ಲಿ ಜಿ.ಪಿ.ಎ. ಮೂಲಕ ಅಧಿಕಾರ ಪಡೆದ ವ್ಯಕ್ತಿಗಳ ಹೆಸರಿಗೆ ಒಟ್ಟು 42 ಎಕರೆ 15 ಗುಂಟೆ ಜಮೀನು ನೀಡಲಾಗಿದೆ. ವಿವರ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

| ಕ್ರಮ ಸಂಖ್ಯೆ | ಜಿ.ಪಿ.ಎ.ದಾರರ ಹೆಸರು | ಗ್ರಾಮ ಮೋಜಣಿ ಸಂಖ್ಯೆ | ವಿಸ್ತೀರ್ಣ | ಅನುಮತಿ ನೀಡಿದ ದಿನಾಂಕ |
|---|---|---|---|---|
| 01. | ಶ್ರೀ ಅರ್ಕನಾಥ | ಬೋಗಾದಿ 130.1ಎ | 2 ಎಕರೆ 30 ಗುಂಟೆ | 17.02.2001 |
| 02. | ಶ್ರೀ ಅರುಣಕುಮಾರ್ | ಹುಚ್ಚ 196:2, 198:2 | 2 ಎಕರೆ 21 ಗುಂಟೆ | 08.05.2002 |
| 03. | ಶ್ರೀ ಅರುಣಕುಮಾರ್ | ಹುಚ್ಚ 204 | 3ಎಕರೆ 26 ಗುಂಟೆ | 16.05.2002 |
| 04. | ಶ್ರೀ ಡಿ ರವಿಕುಮಾರ್ ಬಿನ್ ದೊಡ್ಡಸ್ವಾಮಿಗೌಡ | ಕೇರ್ಗಳ್ಳಿ 9:2, 11:2 | 6 ಎಕರೆ 30 ಗುಂಟೆ | 21.01.2003 |
| 05. | ಶ್ರೀ ಬಸವಣ್ಣ | ಚಿಕ್ಕಳ್ಳಿ 78,7ಡಿ:1-2 87:1,90 | 20 ಎಕರೆ 28 ಗುಂಟೆ | 01.12.2001 |
| 06. | ಶ್ರೀ ಟಿ.ಕೆ. ಸುಧೀಂದ್ರ | ದಟ್ಟಗಳ್ಳಿ 104:1 | 1 ಎಕರೆ 10 ಗುಂಟೆ | 10.01.2003 |
| 07. | ಶ್ರೀ ಎಂ.ಎನ್.ಜಯಶಂಕರ್ ಮತ್ತು ಶ್ರೀ ಬಿ.ಎಲ್. ನಾಗೇಂದ್ರ | ದಟ್ಟಗಳ್ಳಿ 111 | 4 ಎಕರೆ 30 ಗುಂಟೆ | 21.09.2002 |

ಬಿ.ಡಿ.ಎ. ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಡಿನೋಟಿಫಿಕೇಶನ್

1339 (1961) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 11.10.1999ರ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಭೂ ಸ್ವಾಧೀನ ಪಡೆದಿದ್ದು, ನಂತರ ಡಿ ನೋಟಿಫೈಡ್ ಮಾಡಿರುವ ಪ್ರಕರಣಗಳು ಎಷ್ಟು;

ಆ) ಯಾವ ಯಾವ ಸಂಸ್ಥೆ : ವ್ಯಕ್ತಿಗಳಿಗಾಗಿ ಡಿ ನೋಟಿಫಿಕೇಷನ್ ಮಾಡಲಾಗಿದೆ;

ಇ) ಬಿ.ಡಿ.ಎ. ಎಷ್ಟು ಅನಧಿಕೃತ ಬಡಾವಣೆಗಳನ್ನು ಗುರುತಿಸಿದೆ; ಅವು ಯಾವುವು; ಅವುಗಳನ್ನು ಅಧಿಕೃತಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಈ) ಅನಧಿಕೃತ ಬಡಾವಣೆ ಹೆಚ್ಚದಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಬಿ.ಡಿ.ಎ. ವ್ಯಾಪ್ತಿಯಲ್ಲಿ ಸರ್ಕಾರ ಭೂಮಿಯನ್ನು ನಿವೇಶನ ಅಥವಾ ಬಡಾವಣೆಯಾಗಿ ಅಭಿವೃದ್ಧಿಪಡಿಸಿರುವ ಪ್ರದೇಶ ಎಷ್ಟು; ಅವು ಯಾವುವು; ಇದನ್ನು ಸಕ್ರಮಗೊಳಿಸಲು ಸರ್ಕಾರ ಕೈಗೊಂಡ ಕ್ರಮ ಏನು?